INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
Page No,39-44
Peer -Reviewed, Refereed Journal

# ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಸಾಮಾಜಿಕ ವ್ಯವಸ್ಥೆಯ ವಿವಿಧ ಆಯಾಮಗಳು

* ಕಾವ್ಯ.ಎಂ.[1]
**ಪ್ರೊ.ಎಂ.ಜಿ.ಮಂಜುನಾಥ.[2]

ಕನ್ನಡ ಓದುಗರಿಗೆ ಚಿರಪರಿಚಿತ ಕಾದಂಬರಿಕಾರರಾಗಿದ್ದ ಟಿ.ಕೆ.ರಾಮರಾವ್ ಅವರ ಕಾದಂಬರಿಗಳಲ್ಲಿ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ವಿನ್ಯಾಸಗಳು ಆಳವಾಗಿ ಕಾಣಿಸುತ್ತವೆ. ಇವರ ಕಾದಂಬರಿಗಳಲ್ಲಿ ಕಂಡುಬರುವ ಸಾಮಾಜಿಕ ಬದಲಾವಣೆಗಳ ಸ್ವರೂಪ, ವರ್ಗ ವ್ಯವಸ್ಥೆ, ಅಂತರ್‌ಜಾತಿ ವಿವಾಹ, ಅಸ್ಪೃಶ್ಯತೆ, ಸಾಮಾಜಿಕ ಸುಧಾರಣೆ, ಗ್ರಾಮ ಜೀವನದ ಪಲ್ಲಟಗಳು, ಅಭಿವೃದ್ಧಿಯ ನೆಲೆಗಳು ತೊಡಕುಗಳು, ಕೃಷಿ ಪ್ರಧಾನ ನೆಲೆ ಮತ್ತು ಗ್ರಾಮಾಭಿವೃದ್ಧಿ, ಪ್ರಕೃತಿಯೊಂದಿಗಿನ ಸಂಬಂಧ, ಪಾಶ್ಚಾತ್ಯ ಸಂಸ್ಕೃತಿ, ಜೀವನ ಶೈಲಿಯ ಅವವಡಿಕೆ ಮತ್ತು ತಾಕಲಾಟಗಳು, ಸಮಾಜ ವ್ಯವಸ್ಥೆ ಮತ್ತು ಅಪರಾಧ ಜಗತ್ತಿನ ಸಂಬಂಧ, ಕಳ್ಳ ಸಾಗಣಿಕೆ, ಕಳ್ಳನೋಟು, ಕಾಳದಂಧೆ ಮೊದಲಾದ ವಿಚಾರಗಳು ಈ ಹಿನ್ನೆಲೆಯಲ್ಲಿ ಬಹಳ ಮುಖ್ಯವಾಗುತ್ತವೆ.

ಪ್ರಗತಿಶೀಲ ಚಳುವಳಿಯ ಹಿನ್ನೆಲೆಗೆ ಸರಿಯುತ್ತಿದ್ದ ಸಂದರ್ಭದಲ್ಲಿ ದಲಿತ, ಬಂಡಾಯ, ಮಹಿಳಾ ಚಳುವಳಿ ಹೀಗೆ ವೈವಿಧ್ಯಮಯವಾದ ಬರವಣಿಗೆಗಳು ಬಂದವು. ಅಂತಹ ಸಂದರ್ಭದಲ್ಲಿಯೇ ಟಿ.ಕೆ.ರಾಮರಾವ್ ಅವರು ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದರು. ಮತ್ತು ಜನಪ್ರಿಯ ಲೇಖಕರಾಗಿದ್ದರು ಎಂಬುದನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕಾಗುತ್ತದೆ. ಸಮಾಜದ ವಿವಿಧ ಸ್ತರದ ಜನರ ಚಿತ್ರಣ, ಸಮುದಾಯಗಳು, ವೃತ್ತಿಗಳು ಇವರ ಅನೇಕ ಕಾದಂಬರಿಗಳಲ್ಲಿ ಕಾಣಿಸುತ್ತವೆ. ಯಾವುದೇ ಬಗೆಯ ನಿರ್ದಿಷ್ಟ ಪಂಥ, ನಿಲುವು, ಒಲವುಗಳನ್ನು ಹೊಂದದೆ, ಕೇವಲ ವಿವಿಧ ಬಗೆಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಜನಪ್ರಿಯ ಕಾದಂಬರಿಗಳನ್ನು ಬರೆದರು ಎಂಬುದು ಗಮನಾರ್ಹ ವಿಚಾರ.

---

**1.ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.**

**2.ಕನ್ನಡ ಪ್ರಾಧ್ಯಾಪಕರು ಮತ್ತು ಕುಲಸಚಿವರು(ಮೌಲ್ಯಮಾಪನ) ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು.**

ಈ ಹಿನ್ನೆಲೆಯಲ್ಲಿ ಟಿ.ಕೆ.ರಾಮರಾವ್ ಅವರ ಅಭಿಪ್ರಾಯವೊಂದನ್ನು ಇಲ್ಲಿ ಗಮನಿಸಬಹುದಾಗಿದೆ. "ನಾನು ಯಾವ ಗುಂಪಿಗೂ ಸೇರಿದವನಲ್ಲ, ನವ್ಯ, ಬಂಡಾಯ ಇತ್ಯಾದಿ ಸಾಹಿತ್ಯದ ಬಗ್ಗೆಯೂ ನನಗೆ ತಿಳಿದಿಲ್ಲ ಎನ್ನುವ ಅವರಿಗೆ ತಿಳಿದುಕೊಳ್ಳದೇ ಇದ್ದುದರ ಬಗ್ಗೆ ತೀವ್ರ ವಿಷಾದವೇನು ಇದ್ದಂತಿಲ್ಲ. ತಿಳಿದುಕೊಂಡ ಹಲವರಿಗಿರುವ ಅಹಂಕಾರ, ಸ್ವಪ್ರತಿಷ್ಠೆಗಳನ್ನು ನೋಡಿದರೆ ತಿಳಿದುಕೊಳ್ಳದೇ ಇದ್ದುದೇ ವಾಸಿಯೇನೋ" [1] ಎಂದು ಅವರ ಬಗೆಗಿನ ವರದಿಯೊಂದರಲ್ಲಿ ಮಂಗ್ಳೂರು ವಿಜಯ ಅವರು ಗುರುತಿಸುತ್ತಾರೆ. ಹಾಗೆಂದು ಅವರು ಸಮಕಾಲೀನ ಸಂದರ್ಭದ ಸಾಹಿತ್ಯಿಕ ಬೆಳವಣಿಗೆಗಳನ್ನು ಕಡೆಗಣಿಸಿದ್ದರು ಎಂದು ಹೇಳುವಂತಿಲ್ಲ. ಹಾಗೆಯೇ ಸಾಮಾಜಿಕ ಕಳವಳಿ, ಸಾಂಸ್ಕೃತಿಕ ಪಲ್ಲಟಗಳ ಅರಿವು ಅವರಿಗೆ ಇರಲಿಲ್ಲ ಎಂದು ಹೇಳುವುದು ಸಾಧ್ಯವಿಲ್ಲ. ಅವರಿಗೆ ಇರಲಿಲ್ಲ ಎಂದು ಹೇಳುವುದು ಸಾಧ್ಯವಿಲ್ಲ. ಅವರಿಗೆ ಅಂದಿನ ಹಲವು ವಿಚಾರಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಇದ್ದಿತು. ಅವರು ತಮ್ಮ ಅಭಿವ್ಯಕ್ತಿಯ ಹಾದಿ ಭಿನ್ನವಾದುದು ಎಂಬ ನಿಲುವು ಹೊಂದಿದ್ದರು. ಇದಕ್ಕೆ ಬಂಗಾರದ ಮನುಷ್ಯ, ಮೂರುಜನ್ಮ, ಪಶ್ಚಿಮಮುಖಿ, ಕೋವಿಕುಂಚ ಮೊದಲಾದ ಕಾದಂಬರಿಗಳು ಸ್ಪಷ್ಟ ಉದಾಹರಣೆಗಳಾಗಿವೆ.

ಟಿ.ಕೆ. ರಾಮರಾವ್ ಅವರು ತಮ್ಮ ಬರವಣಿಗೆಯ ಶೈಲಿ, ವಸ್ತು, ಸ್ವರೂಪಗಳ ಬಗ್ಗೆ ಮಂಗ್ಳೂರು ವಿಜಯ ಅವರಿಗೆ ನೀಡಿದ ಸಂದರ್ಶನದಲ್ಲಿ ಹೀಗೆ ಹೇಳುತ್ತಾರೆ . " ಓದುಗರ ಅಭಿರುಚಿಯ ನಾಡಿಬಡಿತ ಅರ್ಥಮಾಡಿಕೊಳ್ಳುವುದೇ ಕಷ್ಟ. ವರ್ಷಗಳು ಉರುಳಿದ ಹಾಗೆ ಬರವಣಿಗೆಯ ಶೈಲಿ ಆಯ್ಕೆ ಮಾಡಿಕೊಳ್ಳುವ ವಸ್ತು, ಕಥಾ ಹಂದರ ಬೆಳೆಸುವ ಬಗೆ ಇತ್ಯಾದಿಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ನಾನಂತೂ ಸರಿ ಸುಮಾರು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಹೀಗೆ ಸ್ಟೈಲ್ ಬದಲಾಯಿಸುತ್ತಲೇ ಬಂದಿರುವೆ. ಮತ್ತೇ ಕಾದಂಬರಿ ಬರೆಯೋದು ಸುಲಭ. ಆದರೆ ನಾನು ಬರೆಯೋತರ ಸಾಮಾಜಿಕ ಪತ್ತೇದಾರಿ ಕಾದಂಬರಿ ಬರೆಯೋದು ತುಂಬಾ ಕಷ್ಟ".[2] ಟಿ.ಕೆ. ರಾಮರಾವ್ ಅವರನ್ನು ಪತ್ತೇದಾರಿ ಕಾದಂಬರಿಕಾರರೆಂದು ಗುರುತಿಸಲಾಗುತ್ತದೆ. ಆದರೆ ಅವರ ಪತ್ತೇದಾರಿ ಕಾದಂಬರಿಗಳು ಎಂದು ಸಾಮಾನ್ಯವಾಗಿ ಗುರುತಿಸಲಾಗುವ ಹಲವು ಕಾದಂಬರಿಗಳು ಸಾಮಾಜಿಕ ಕಾದಂಬರಿಗಳು ಆಗಿದ್ದವು ಎಂಬುದನ್ನು ನಾವು ವಿಶೇಷವಾಗಿ ಗಮನಿಸಬೇಕು. ಈ ವಿನ್ಯಾಸದ ಬದಲಾವಣೆಯು ಸಮಕಾಲೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿನ್ಯಾಸಗಳೊಂದಿಗೆ ಸಂಬಂಧ ಹೊಂದಿದೆ. ಎಂಬುದನ್ನು ಇಲ್ಲಿ ಗುರುತಿಸಬಹುದು. ಅವರ ಬಂಗಾರದ ಮನುಷ್ಯ, ದೂರಗಗನ ಮೊದಲಾದ ಕಾದಂಬರಿಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೃಷಿ, ಹಳ್ಳಿಯ ಬದುಕಿನ ಪ್ರಸ್ತಾಪವನ್ನು ಮಾಡುವುದು ಬದಲಾಗುತ್ತಿದ್ದ ಸಾಂಸ್ಕೃತಿಕ ವಿನ್ಯಾಸದ ಸೂಚಕವಾಗುತ್ತದೆ.

ಈ ಹಿನ್ನೆಲೆಯಲ್ಲಿ ಟಿ.ಕೆ. ರಾಮರಾವ್ ಅವರ ಕಾದಂಬರಿಗಳ ಸಾಮಾಜಿಕ ಆಯಾಮವು ಬಹಳ ಮುಖ್ಯವಾದುದಾಗಿದೆ. ಸಂಸ್ಕೃತಿಯ ಅನೇಕ ಅಂಶಗಳು ಕಾದಂಬರಿಯ ಭಾಗವಾಗಿ ಬರುವುದರಿಂದ

ಅವುಗಳ ಸೂಕ್ಷ್ಮ ಅಧ್ಯಯನವು ಹೊಸ-ಹೊಸ ವಿಚಾರಗಳನ್ನು ಬೆಳಕಿಗೆ ತರುತ್ತದೆ. ಕನ್ನಡ ಕಾದಂಬರಿ ಪರಂಪರೆಯ ವಸ್ತು ವಿನ್ಯಾಸಗಳನ್ನು ಗಮನಿಸಿದರೆ ಇಲ್ಲಿ ಸಮಾಜ ಸಂಸ್ಕೃತಿ ಸಂಬಂಧವಾದ ಅನೇಕ ವಿಚಾರಗಳು ಕಾಣಿಸುತ್ತಾ ಬರುತ್ತವೆ. ಉದಾಹರಣೆಗೆ ಕನ್ನಡದ ಆರಂಭಿಕ ಕಾದಂಬರಿಗಳು ಸ್ತ್ರೀಪರ ಕಾಳಜಿಗಳನ್ನು ಒಳಗೊಂಡಿದ್ದರೆ ಪ್ರಗತಿಶೀಲ ಸಂದರ್ಭದ ಕಾದಂಬರಿಗಳ ಸಮಾಜದ ಸಮಸ್ಯೆ ಮತ್ತು ಶೋಷಣೆಗಳನ್ನು ಒಳಗೊಂಡಿದ್ದವು. ಈ ಎಲ್ಲಾ ಕಾದಂಬರಿಗಳು ಅನೇಕ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದ್ದವು ಟಿ.ಕೆ. ರಾಮರಾವ್ ಅವರು ಕನ್ನಡ ಕಾದಂಬರಿ ಪರಂಪರೆಯಲ್ಲಿ ಒಂದು ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಅಧ್ಯಯನದ ದೃಷ್ಟಿಯಿಂದ ನಿರ್ಲಕ್ಷ್ಯಕ್ಕೆ ಒಳಗಾದರೂ ಓದುಗ ವಲಯದ ದೃಷ್ಟಿಯಿಂದ ಮುಖ್ಯವೆನಿಸುತ್ತಾರೆ.

ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಸಾಮಾಜಿಕ ವ್ಯವಸ್ಥೆಯ ವಿವಿಧ ಆಯಾಮಗಳು ಕಾಣಿಸುತ್ತವೆ. ಒಬ್ಬ ಉತ್ತಮ ಕಾದಂಬಂಕಾರರಾಗಿ ಅವರು ಅನೇಕ ಸೂಕ್ಷ್ಮ ವಿಷಯಗಳನ್ನು ಹಲವೆಡೆ ತರುತ್ತಾರೆ. ಉದಹರಣೆಗೆ ಕೋವಿಕುಂಚ ಕಾದಂಬರಿಯಲ್ಲಿ ಜಾತಿವ್ಯವಸ್ಥೆ, ಅಸ್ಪೃಶ್ಯತೆ, ಅಂತರ್ಜಾತಿಯ ವಿವಾಹ, ವರ್ಗವ್ಯವಸ್ಥೆಯ ವಿವಿಧ ಆಯಾಮಗಳನ್ನು ಕಾದಂಬರಿಕಾರರು ಸೂಕ್ಷ್ಮವಾಗಿ ತರುತ್ತಾರೆ. ಹಾಗೆ ತರುವಾಗ ಸಮಕಾಲೀನ ಸಂದರ್ಭದ ಬೆಳವಣಿಗೆಗಳು ಕಾಣಿಸುತ್ತವೆ. ಉದಾಹಣೆಗೆ "ಲಂಬಾಣಿ ಹುಡುಗೀನ ಕಟ್ಕೊಂಡ್ರೆ ದೊಡ್ಡಪ್ಪಗೌಡರ ದೊಡ್ಡ ಕುಲಕ್ಕೆ ಅನ್ಯಾಯ ಅಗುತ್ತಂತ ನಾನು ಭಾರಿ ಮಾತು ಹೇಳ್ತಾ ಇಲ್ಲ ಮನಸ್ಸಿಗೆ ಮನಸ್ಸು ಕೊಡೋವಾಗ ಕುಲದ ಮಾತುಗಾವುದ ಆಚೆಗೆ ಅದನ್ನು ಕೇಳೋದು ಬೇಡ"[3] ಎಂಬುದು ಇಂತಹ ಸಾಮಾಜಿಕ ವ್ಯವಸ್ಥೆಯ ಬದಲಾವಣೆಗಳನ್ನು ಸೂಚಿಸುತ್ತದೆ.

ಮೂರು ಜನ್ಮ ಕಾದಂಬರಿಯಲ್ಲಿ ವರ್ಗ ಮತ್ತು ಜಾತಿ ವ್ಯವಸ್ಥೆಯ ಕರಾಳ ಮುಖಗಳನ್ನು ಕಾದಂಬರಿಯ ಹಂದರದ ಒಳಗೆ ಟಿ.ಕೆ. ರಾಮರಾವ್ ಅವರು ತರುವ ರೀತಿಯಲ್ಲಿ ಇಲ್ಲಿ ಗಮನಿಸಬಹುದು. ಉದಾಹರಣೆಗೆ "ನಮ್ಮ ಜಾತಿಗೆ ಜೋಡು ಹೊಡೀತಿದ್ದೀಯ ನೀನು..... ಹುಂ, ನೀನು ಅಂದ್ರೆ ಎಂತಾ ಕೋಪದಾಗೂ ನಂಗೆ ಎದೆ ಜಗ್ತದೆ, ಓಗು ಚೊಂಬು ಗಂಜಳ ತಂದಿಟ್ಕೊ"[4] ಎಂಬ ಸಾಲುಗಳು ಅಲ್ಲಲ್ಲಿ ಸಮಾಜ ಸಂಸ್ಕೃತಿಯ ಅಂಶಗಳನ್ನು ತೆರೆದಿಡುತ್ತಾ ಹೋಗುತ್ತವೆ. ಅದೇ ರೀತಿ "ಚಮ್ಮಾರ ಜಾತಿಯವಳಾದ ಮಾತ್ರಕ್ಕೆ ಅವಳ ಚರ್ಮದ ಸವಿ ಉಚ್ಚದೆನಿಸಿದವರಿಗೆಲ್ಲಾ ಮೀಸಲೆಂಬ ಸಲೀಸು ಭಾವನೆ"[5] ಎಂಬಂತಹ ಅನೇಕ ವಾಕ್ಯಗಳು ಸಾಂಕೇತಿಕವಾಗಿ ಅಲ್ಲಿನ ವ್ಯವಸ್ಥೆಯ ಚಿತ್ರಗಳನ್ನು ನೀಡುತ್ತವೆ.

ಟಿ.ಕೆ ರಾಮರಾವ್ ಅವರ ಅನೇಕ ಕಾದಂಬರಿಗಳ ನಿರೂಪಣಾ ವಿಧಾನದಲ್ಲಿ ಸಮಾಜ ಸಂಸ್ಕೃತಿಯ ವಿನ್ಯಾಸಗಳು ಆ ಸಂಬಂಧವಾದ ಗ್ರಹಿಕೆಗಳು ಕಾಣಿಸುತ್ತಾ ಹೋಗುತ್ತವೆ. ಉದಾಹರಣೆಗೆ ಕೋವಿಕುಂಚ ಕಾದಂಬರಿಯಲ್ಲಿ "ಈ ಕುರುಬರ ತಾಣಕ್ಕೆ ಬಂದುದು ಹೇಗೆ? ಬಂದುದು ಎಂದು?

ಬೇಡಾದ ಶರೀರ ಎಳೆದು ನಿಧಾನವಾಗಿ ಹೊರಕ್ಕೆ ಅಡಿಯಿಟ್ಟು ನೆಲೆ ತಿಳಿಯಾಗಿತ್ತು."[6] ಎಂಬುದು ಒಟ್ಟು ಕಾದಂಬರಿಯ ನೆಲೆಗಟ್ಟಿನಲ್ಲಿ ಕಾಡು, ನಾಡು, ಗ್ರಾಮ, ನಗರ, ಜೀವನ ಸಂಸ್ಕೃತಿಗಳ ನೆಲೆಗಟ್ಟಿನಲ್ಲಿ ಕಾಡು, ನಾಡು, ಗ್ರಾಮ ನಗರ, ಜೀವನ ಸಂಸ್ಕೃತಿಗಳ ನೆಲೆಗಟ್ಟನಲ್ಲಿ ಮುಖ್ಯವಾಗುತ್ತದೆ. ಸಮಕಾಲೀನ ಸಾಮಾಜಿಕ ವಿನ್ಯಾಸಗಳ ಅರಿವು ಅವರ ಅನೇಕ ಕಾದಂಬರಿಗಳಲ್ಲಿ ಕಂಡುಬರುವ ಇಂತಹ ಸಮಾಜದ ವಿವಿಧ ಸ್ತರದ ವ್ಯಕ್ತಿಗಳು, ಜಾತಿ, ಧರ್ಮ, ಅಂತಸ್ತುಗಳ ಪ್ರತ್ಯಕ್ಷ ಮತ್ತು ಪರೋಕ್ಷ ಉಲ್ಲೇಖಗಳಲ್ಲಿ ಸ್ಪಷ್ಟವಾಗುತ್ತವೆ.

ಅಂತರ್ಜಾತೀಯ ವಿವಾಹದ ಅಂಶಗಳು ಟಿ.ಕೆ. ರಾಮರಾವ್‌ಅವರ ಸರ್ಪದಂತೆ, ಕೋವಿಕುಂಚ, ಪಶ್ಚಿಮ ಬೆಟ್ಟ, ಪಶ್ಚಿಮ ಮುಖಿ ಕಾದಂಬರಿಗಳಲ್ಲಿ ಕಂಡುಬರುತ್ತವೆ. ಅವು ಆದರ್ಶದ ಪ್ರತಿಪಾದನೆಗಾಗಿ ಬಂದವುಗಳಲ್ಲ. ಅವು ಸಮಕಾಲೀನ ಸಾಮಾಜಿಕ ಸಂದರ್ಭದ ಬೆಳವಣಿಗೆಗಳನ್ನು ಸಹಜವಾಗಿಯೇ ಸ್ವೀಕರಿಸಿಕೊಂಡು ಅಭಿವ್ಯಕ್ತಿಸಿರುವ ಬಗೆಗಳಾಗಿವೆ. ಇಲ್ಲಿ ಅಂತಹ ಅಂತರ್ಜಾತಿಯ ವಿವಾಹದ ಪ್ರಸ್ತುತತೆಗಿಂತಲೂ ಅದು ಸಮಕಾಲೀನ ಸಮಾಜದ ಬಹಳ ಸಹಜವಾದ ಪ್ರಕ್ರಿಯೆ ಎಂಬ ನೆಲೆಯಲ್ಲಿ ನೀಡಿರುವುದನ್ನು ಇಲ್ಲಿ ಗಮನಿಸಬೇಕು.

ಸಮಕಾಲೀನ ಸಾಮಾಜಿಕ ಸಂದರ್ಭ ಮತ್ತು ಸಂಸ್ಕೃತಿಯ ಸ್ಥಿತ್ಯಂತರಗಳ ವಿವಿಧ ಆಯಾಮಗಳನ್ನು ಟಿ.ಕೆ. ರಾಮರಾವ್ ಅವರ ಕಾದಂಬರಿಗಳಲ್ಲಿ ಕಾಣಬಹುದು. ಊರೊಂದಕ್ಕೆ ರಸ್ತೆಯ ನಿರ್ಮಾಣದ ವಿಚಾರವು ಮೂರುಜನ್ಮ ಕಾದಂಬರಿಯಲ್ಲಿ ಚಿತ್ರತವಾಗಿದೆ. ಅದೇ ರೀತಿ ಊರಿಗೆ ಬಸ್ ವ್ಯವಸ್ಥೆ ಪ್ರಾರಂಭವಾಗುವ ಮತ್ತು ಜನರ ಓಡಾಟಗಳು ಪಟ್ಟಣ ಮತ್ತು ಹಳ್ಳಿಯ ನಡುವೆ ಸಲೀಸಾಗಿ ಸಾಗುವ ಚಿತ್ರಣವು ಕಾಣಿಸುತ್ತದೆ. ಗ್ರಾಮ ಜೀವನದ ಪಲ್ಲಟಗಳು, ಗ್ರಾಮ ಜೀವನದ ಪರಕಲ್ಪನೆಗಳು ಬಂಗಾರದ ಮನುಷ್ಯ, ದೂರಗಗನ, ಕೋವಿಕುಂಚ ಮುಂತಾದ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಗ್ರಾಮೀಣ ಬದುಕಿನ ದುಃಖ ದುಮ್ಮಾನಗಳನ್ನು ಅಲ್ಲಿನ ನಿತ್ಯ ಜೀವನದ ಸತ್ಯ ಘಟನೆಗಳನ್ನು ಒಳಗೊಳ್ಳುವ ಬಗೆಯನ್ನು ಅವರ ಅನೇಕ ಕಾದಂಬರಿಗಳಲ್ಲಿ ಕಾಣಬಹುದು.

ಬಂಗಾರದ ಮನುಷ್ಯ ಕಾದಂಬರಿಯಲ್ಲಿ ಕೃಷಿ ಪ್ರಧಾನ ನೆಲೆ ಮತ್ತು ಗ್ರಾಮಾಭಿವೃದ್ಧಿಯ ಮುಖ್ಯವಾದ ಪ್ರತಿಪಾದನೆಯನ್ನು ಕಾಣಬಹುದು. ಅತ್ಯಂತ ಸಹಜವಾದ ಸಂಭಾಷಣೆಗಳೊಂದಿಗೆ, ಸರಳವಾದ ನಿರೂಪಣೆಯೊಂದಿಗೆ ಗಮನಾರ್ಹ ವಿಚಾರಗಳನ್ನು ಓದುಗರ ಮನ ಮುಟ್ಟುವಂತೆ ಚಿತ್ರಿಸಿರುವ ಈ ಕಾದಂಬರಿಯು ಸಾಮಾಜಿಕ ವಿನ್ಯಾಸವನ್ನು ಬಹಳ ಸೊಗಸಾಗಿ ಹಿಡಿದಿಡುತ್ತದೆ. ಇಲ್ಲಿ ಕೃಷಿ ಸಂಬಂಧವಾದ ವಿಚಾರಗಳು ಹೇರಳವಾಗಿ ಕಾಣಿಸುತ್ತಿದ್ದು ಓದುಗರ ಮೇಲೆ ಅತ್ಯಂತ ಪ್ರಭಾವನ್ನು ಬೀರುತ್ತವೆ.

ಉಹಾಹರಣೆಗೆ "ಭೂಮಿ ಬಿಗಿ ಇಡದಿದ್ರಾ ಇನ್ನೂ, ಮುಂದಿನ ಕಾರು ಬೆಳೆಗೆ ಸರಿ ಓತ್ತೈತೆ, ಸತ್ವಐತೆ ಭೂಮ್ಯಾಗೆ ಅಂತ ಗೊತ್ತಾಯ್ತು"[7] ಎಂಬುದು ಸರಳವಾದ ಆದರೆ ಪ್ರಭಾವಶಾಲಿಯಾದ ಅವರ

ಕಥನ ಶೈಲಿಯನ್ನು ಸೂಚಿಸುತ್ತದೆ. ಅದೇ ವೇಳೆ ಒಂದು ಕಾದಂಬರಿ ಒಳಗೊಳ್ಳುವ ಸಮಾಜದ ವಿವಿಧ ನೆಲೆಗಳನ್ನು ಗಮನಿಸುವ ಸಂದರ್ಭದಲ್ಲಿ ಬಂಗಾರದ ಮನುಷ್ಯ ಕಾದಂಬರಿಯ ಒಟ್ಟು ಆಶಯವು ಬಹಳ ಮುಖ್ಯವಾಗುತ್ತದೆ.

ಕಾದಂಬರಿಯ ಒಟ್ಟು ವಸ್ತು, ವಿಷಯ, ಆಶಯಗಳು ಭಿನ್ನವಾಗಿದ್ದಾಗಲೂ ಕೃಷಿ ಸಂಬಂಧಿ ವಿಚಾರಗಳನ್ನು ಅವರು ಗ್ರಾಮ ಜೀವನದ ಚಿತ್ರಣದೊಂದಿಗೆ ನೀಡುವುದನ್ನು ಕಾಣಬಹುದು. ಸಮಕಾಲೀನ ಸಮಾಜದ ಬದಲಾಗುತ್ತಿರುವ ಆಶಯಗಳ ಅಭಿವ್ಯಕ್ತಿಯು ಅನೇಕ ಕಾದಂಬರಿಗಳಲ್ಲಿ ಕಾಣಿಸುತ್ತದೆ. ನಾಗರೀಕತೆಯ ನಾಗಾಲೋಟ, ಆಧುನೀಕರಣದ ಪ್ರಭಾವ ಸ್ಥಳೀಯ ಸಂಸ್ಕೃತಿಯ ಮೇಲೆ ಬೀರುತ್ತಿರುವ ಪ್ರಭಾವದ ಪರೋಕ್ಷ ಅರಿವು ಅನೇಕ ಕಡೆಗಳಲ್ಲಿ ಕಾಣಿಸುತ್ತದೆ. ಅವರ ಅನೇಕ ಕಾದಂಬರಿಗಳಲ್ಲಿ ಸ್ಥಳೀಯ ಸಂಸ್ಕೃತಿಯ ಮೂಲ ನೆಲೆಗಳ ಪರೋಕ್ಷ ಉಲ್ಲೇಖಗಳು ಕಾಣಿಸುತ್ತವೆ. ಮುಖ್ಯವಾಗಿ ಕೃಷಿ ಚಟುವಟಿಕೆಗಳ ಸಹಜ ಉಲ್ಲೇಖ ಅವರ ಕಾದಂಬರಿಗಳಲ್ಲಿ ವಿಶೇಷವಾಗಿ ಕಾಣಿಸುತ್ತದೆ.

ಸಮಾಜ ವ್ಯವಸ್ಥೆ ಮತ್ತು ಅಪರಾಧ ಜಗತ್ತಿನ ಸಂಬಂಧ ಅವರ ಅನೇಕ ಸಾಮಾಜಿಕ ಮತ್ತು ಪತ್ತೇದಾರಿ ಕಾದಂಬರಿಗಳಲ್ಲಿ ಕಂಡುಬರುತ್ತವೆ. ಅವರ ದೂರಗಗನ, ಸರ್ಪದಂಡೆ, ಬಣ್ಣದ ಹುಳು, ಸೀಳು ನಕ್ಷತ್ರ, ನಕ್ಷತ್ರಮೀನು ಮೊದಲಾದ ಕಾದಂಬರಿಗಳಲ್ಲಿ ಈ ಸಂಬಂಧವಾದ ಬೇರೆ ಬೇರೆ ಅಂಶಗಳು ಕಾಣಿಸುತ್ತವೆ. ಕಳ್ಳಸಾಗಣೆ, ಖೋಟಾನೋಟು ಹೀಗೆ ಅಂದಿನ ಜ್ವಲಂತ ಸಮಸ್ಯೆಗಳ ವಿವಿಧ ಮುಖಗಳು ಅವರ ಕಾದಂಬರಿಗಳಲ್ಲಿ ಕುತೂಹಲಕರವಾದ ರೀತಿಯಲ್ಲಿ ಅನಾವರಣಗೊಳ್ಳುತ್ತವೆ.

ಸಾಮಾಜಿಕ ಕಾದಂಬರಿಯ ಕಥಾಹಂದರದೊಳಗೆ ಅಪರಾಧ ಜಗತ್ತಿನ ವಿವರಗಳನ್ನು ಅವರು ತರುವ ರೀತಿಯು ಪ್ರಾರಂಭದ ಕಾದಂಬರಿಯಿಂದಲೇ ಕಾಣಿಸುತ್ತದೆ. ಉದಾಹರಣೆಗೆ ದೂರಗಗನ ಕಾದಂಬರಿಯಲ್ಲಿ "ಕೊಯಮತ್ತೂರಿನ ಆಗರ್ಭ ಶ್ರೀಮಂತ ಮುತ್ತಪ್ಪ ಚೆಟ್ಟಿಯಾರ್ ಎಷ್ಟೋ ವರ್ಷಗಳ ಹಿಂದಿನಿಂದ ಖೋಟಾನೋಟುಗಳ ತಯಾರಿಕೆ ನಡೆಸಿದ್ದರು. ಅವುಗಳನ್ನು ಮಧುಸೂದನರಾಯರು ಸಮನಾದ ಪಾಲುಗಾರಿಕೆಯ ಒಪ್ಪಂದದ ಮೇಲೆ ತಮ್ಮ ಸರಹದ್ದಿನಲ್ಲೆಲ್ಲಾ ತಮ್ಮ ಕೈವಾಡವಿರುವ ಕಡೆಗಳಲ್ಲೆಲ್ಲಾ ಚಲಾವಣೆ ಮಾಡಿ ಮುಗಿಸಿದ್ದರು.... ರಾಯರ ಎಸ್ಟೇಟಿನ ಅರ್ಧಕೋಣೆಯ ತುಂಬಾ ಅದೇ ಖೋಟಾ ನೋಟುಗಳೇ"[8] ಇಲ್ಲಿ ಕಾದಂಬರಿಯ ಕೇಂದ್ರ ಪಾತ್ರವಾದ ಮಧುಸೂದನ ರಾಯರ ಉಳಿದೆಲ್ಲಾ ಉತ್ತಮ ಕಾರ್ಯಗಳ ನಡುವೆ ಇಂತಹ ಕಪ್ಪುಚುಕ್ಕಿ ಹಾಗೆಯೇ ಉಳಿದುಬಿಡುವುದನ್ನು ಸೂಚ್ಯವಾಗಿ ತೋರಿಸುತ್ತಾರೆ. ಜನಪ್ರಿಯ ಕಾದಂಬರಿಕಾರರಾದ ಟಿ.ಕೆ. ರಾಮರಾವ್ ಅವರು ಪಾತ್ರ, ಸನ್ನಿವೇಶ, ಪರಿಸರಗಳನ್ನು ಮೂಲಕವೇ ಸಮಕಾಲೀನ ಸಂದರ್ಭದ ತಲ್ಲಣಗಳನ್ನು ನಮಗೆ ಅರಿವಾಗುವಂತೆ ಮಾಡುತ್ತಾರೆ.

ಕಳ್ಳನೋಟಿನ ವ್ಯವಹಾರವು ಬಣ್ಣದ ಹುಳು ಕಾದಂಬರಿಯಲ್ಲಿಯೂ ಕಂಡುಬರುತ್ತದೆ. "ಇದು ಸಾಚಾ ನೋಟಲ್ಲ... ಖೋಟಾ ಬಣ್ಣದ ಕಾಗದ"[9] ಎಂದು ಪಾತ್ರವೊಂದು ಹೇಳುತ್ತಲೇ ನೋಟು ಸಂಗ್ರಹದ ನೆಪದಲ್ಲಿ ಸಾಚಾನೋಟು ಮತ್ತು ಖೋಟಾನೋಟಿನ ವ್ಯವಹಾರವನ್ನು ನಡೆಸುವ ಬಗೆಯನ್ನು ಚಿತ್ರಿಸಿದ್ದಾರೆ. ಜನಪ್ರಿಯ ಕಾದಂಬರಿಗಳಲ್ಲಿ ಹಲವಾರು ಸಮಕಾಲೀನ ಅಂಶಗಳು ಒಳಗೊಂಡಿರುತ್ತವೆ. ಇವರ ಕಾದಂಬರಿಗಳು ಬಂದ ಕಾಲಘಟ್ಟವು ಬಹಳ ಮುಖ್ಯವಾದುದು. ಹಲವು ಸಾಮಾಜಿಕ ಪರಿವರ್ತನೆಗಳಿಗೆ ಕಾರಣವಾದ ಬೆಳವಣಿಗೆಯು ಈ ಕಾಲಘಟ್ಟದಲ್ಲಿ ಕಂಡುಬರುತ್ತದೆ. ಹೀಗಾಗಿ ಇವರ ಕಾದಂಬರಿಗಳಲ್ಲಿ ಜನ ಪ್ರೀತಿಗೆ ಕಾರಣವಾಗುವ ಅಂಶಗಳ ಜೊತೆ ಜೊತೆಗೆ ಸಮಕಾಲೀನ ಸಾಮಾಜಿಕ ಸಂದರ್ಭಕ್ಕೆ ಪೂರಕವಾಗುವ ಹಲವು ಅಂಶಗಳನ್ನು ಒಳಗೊಂಡಿವೆ. ಓದುಗರ ಪ್ರೀತಿಯನ್ನು ಗಳಿಸಿದ ಇಂತಹ ಕಾದಂಬರಿಗಳು ತಮ್ಮೊಳಗೆ ಒಂದು ಚಲನಶೀಲತೆಯನ್ನು ಹೊಂದಿರುತ್ತವೆ. ಹೀಗಾಗಿಯೇ ಟಿ.ಕೆ. ರಾಮರಾವ್‌ಅವರ ಕಾದಂರಿಗಳಲ್ಲಿ ಕಾಣಿಸುವ ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸಗಳು ಮುಖ್ಯವಾಗುತ್ತವೆ.

**ಕೊನೆ ಟಿಪ್ಪಣಿ**

1. ಮಂಗ್ಳೂರು ವಿಜಯ, ಸುದ್ದಿ ಸಂಗಾತಿ, 6–11– 1988
2. ಅದೇ
3. ಟಿ.ಕೆ. ರಾಮರಾವ್, ಸರ್ಪದಂಡೆ, ಪು.ಸಂ. 28
4. ಟಿ.ಕೆ. ರಾಮರಾವ್, ಮೂರು ಜನ್ಮ, ಪು.ಸಂ.22
5. ಅದೇ, ಪು.ಸಂ.126
6. ಟಿ.ಕೆ. ರಾಮರಾವ್, ಕೋವಿ ಕುಂಚ, ಪು.ಸಂ.234
7. ಟಿ.ಕೆ. ರಾಮರಾವ್, ಬಂಗಾರದ ಮನುಷ್ಯ, ಪು.ಸಂ.38
8. ಟಿ.ಕೆ. ರಾಮರಾವ್, ದೂರಗಗನ, ಪು.ಸಂ.38
9. ಟಿ.ಕೆ. ರಾಮರಾವ್, ಬಣ್ಣದ ಹುಳು,ಪು.ಸಂ.01